4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿಸಿ ನಂ- 14253/2014 ಚಾ.ಸಾ.-1 ಅ.ಸಾ.- 1

ಪ್ರ.ವ.ಬೊ. ದಿಃ 27.03.2018

ಸಾಕ್ಷಿದಾರನ ಹೆಸರು : ಅನುಪಮಾ

ಗಂಡನ ಹೆಸರು : ಲೇಟ್ ಮಹೇಶ್

ವಯಸ್ಸು : 48 ವರ್ಷ

ಕೆಲಸ : ವ್ಯಾಪಾರ

ವಾಸ : ಹೊಳೆನರಸೀಪುರ

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ಮೃತ ಚಾ.ಸಾ.2 ನನ್ನ ತಂದೆ. ಜೆ.ಪುಟ್ಟಸ್ವಾಮಿಗೌಡ ನನ್ನ ಮಾವ. ನಾವು ಆರ್ಎಂಸಿ ಯಾರ್ಡ್ ಎಪಿಎಂಸಿ ಯಾರ್ಡ್‌ನ 4ನೇ ಮುಖ್ಯರಸ್ತೆಯಲ್ಲಿ ಮಹೇಶ್ ಎಂಟರ್‌ಪ್ರೈಸಸ್ ಎಂಬ ಅಕ್ಕಿ ಅಂಗಡಿ ಇಟ್ಟುಕೊಂಡು ಹೋಲ್‌ಸೇಲ್ ದರದಲ್ಲಿ ವ್ಯಾಪಾರ ಮಾಡುತ್ತೇವೆ. ಈ ಅಂಗಡಿಗೆ ನಾನು ನನ್ನ ಮಾವ ಹಾಗೂ ನನ್ನ ತಂದೆ ಪಾಲುದಾರರಾಗಿ ವ್ಯಾಪಾರ ನಡೆಸುತ್ತಿದ್ದೆವು. ಈ ಅಂಗಡಿಯನ್ನು ಸುಮಾರು 20 ವಷಶಗಳಿಂದ ನಡೆಸುತ್ತಿದ್ದೇವೆ. ಆರೋಪಿ ನನಗೆ ಗೊತ್ತು. ಆರೋಪಿ ನನ್ನ ಮಾವನ ದೂರದ ಸಂಬಂಧಿ. ಆರೋಪಿಯನ್ನು ನಾವು ನಮ್ಮ ಅಂಗಡಿಗೆ ಮ್ಯಾನೇಜರ್ ಆಗಿ ಕೆಲಸಕ್ಕೆ ಸೇರಿಸಿಕೊಂಡಿರುತ್ತೇವೆ. ಆರೋಪಿ ನಮ್ಮ ಅಂಗಡಿಗೆ ಸಂಬಂಧಪಟ್ಟ ಬ್ಯಾಂಕಿನ ವ್ಯವಹಾರಗಳು, ಖರೀದಿ ಮತ್ತು ಮಾರಾಟ ಮಾಡಿ ಬಂದ ಹಣವನ್ನು ಐಎನ್‌ಜಿ ವೈಶ್ಯ ಬ್ಯಾಂಕ್ ನನ್ನ, ನಮ್ಮ ಮಾವನ ಹಾಗೂ ತಂದೆಯ ಹೆಸರಿಗೆ ಇರುವ ಬ್ಯಾಂಕಿನ ಖಾತೆಗೆ ಜಮಾ ಮಾಡುವುದು ಆರೋಪಿಯ ಕೆಲಸವಾಗಿತ್ತು. ನನ್ನ ಮಾವ ಜಿ.ಪುಟ್ಟಸ್ವಾಮೇಗೌಡರು 2006 ನೇ ಇಸವಿಯಲ್ಲಿ ಮೃತಪಟ್ಟಿರುತ್ತಾರೆ. ನಾವು ನಡೆಸುತ್ತಿದ್ದ ಅಂಗಡಿಯನ್ನು ಪಾರ್ವತಮ್ಮ ಅವರ ಕಡೆಯಿಂದ ಬಾಡಿಗೆಗೆ ಪಡೆದಿದ್ದೆವು. ನಮ್ಮ ಮಾವ ಕೇಳಿಕೊಂಡ ನಂತರ ಪಾರ್ವತಮ್ಮ ಅವರು ಅಂಗಡಿಯನ್ನು ಖಾಲಿ ಮಾಡಿಕೊಡಿ ಎಂದು ಕೇಳುತ್ತಿದ್ದರು. ಆಗ ನನ್ನ ತಂದೆಯನ್ನು ಕೇಳಿ ಹೇಳುತ್ತೇನೆ ಎಂದು ಹೇಳಿದರು.

ನಮ್ಮ ತಂದೆ ಖಾಲಿ ಮಾಡಿ ಎಂದು ಹೇಳಿದ ಕಾರಣ ನಾನು ಅಂಗಡಿಯನ್ನು ಖಾಲಿ ಮಾಡುತ್ತಿದ್ದೆ. ಆಗ ನಾನು ಆರೋಪಿಗೆ ಹೋಗಿ ಅಂಗಡಿ ಖಾಲಿ ಮಾಡುವಂತೆ ಹೇಳಿದೆ. ಆಗ ಆರೋಪಿ ನಾನು ಕೂಡ ಒಬ್ಬ ಪಾಲುದಾರ ಇದ್ದೇನೆ ಎಂದು ಹೇಳಿ partnership deed ನ್ನು ತೋರಿಸಿದ. ಆ partnership deed ನ ಪ್ರಕಾರ 2002 ರಲ್ಲಿ ನನ್ನನ್ನು ಪಾಲುದಾರಿಕೆಯಿಂದ ತೆಗೆದುಹಾಕಿದ್ದ, 2005 ರಲ್ಲಿ ಮತ್ತೆ partnership deed ನ್ನು ಮಾಡಿಕೊಂಡು ಪಾಲುದಾರನಾಗಿ ನಮ್ಮ ತಂದೆ ನಮ್ಮ ಮಾವ ಮತ್ತು ಆರೋಪಿಯನ್ನು ತೋರಿಸಲಾಗಿತ್ತು, ಆ partnership deed ನಲ್ಲಿ ನನ್ನ ಮತ್ತು ನನ್ನ ತಂದೆ ಮತ್ತು ಮಾವನ ಸಹಿಗಳನ್ನು ನಕಲಿ ಮಾಡಿ ಆ deed ನ್ನು ಸೃಷ್ಟಿಸಲಾಗಿತ್ತು, ಈ ಬಗ್ಗೆ ನನಗೆ ಗೊತ್ತಾಗಿ ನಾನು 2012 ರಲ್ಲಿ ದೂರನ್ನು ಕೊಟ್ಟಿದ್ದೆ. ಸಾಕ್ಷಿ ದೂರನ್ನು ಗುರುತಿಸಿದ್ದು ನಿ.ಪಿ.1 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಹಿರಿಯ ಸರ್ಕಾರಿ ಸಹಾಯಕ ಅಭಿಯಂತರರು ಸಮಯ ಕೋರಿದ್ದರಿಂದ ಮುಂದುವರಿದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

(ರೂಪ ಆರ್ ಕುಲಕರ್ಣಿ)
4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 20.02.2019 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದಃ

ಸಾಕ್ಷಿ ಮುಂದುವರೆದು ದೂರಿನೊಂದಿಗೆ ನಾನು ತನಿಖಾಧಿಕಾರಿಗಳಿಗೆ ನಮ್ಮ ಮಹೇಶ್ ಎಂಟರ್‌ಪ್ರೈಸಸ್‌ಗೆ ಸಂಬಂಧಿಸಿದಂತೆ ಪಾಲುದಾರಿಕೆ ಡೀಡ್ ಅಸಲು ಪ್ರತಿಯನ್ನು ನೀಡಿರುತ್ತೇನೆ. ಸಾಕ್ಷಿ ಸದರಿ ದಾಖಲೆಯನ್ನು ಗುರುತಿಸಿದ್ದು ನಿ.ಪಿ.2 (5 ಪುಟಗಳು) ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಿ.ಪಿ.2 ರ ಪ್ರಕಾರ ನಾನು, ನನ್ನ ಮಾವ ಮತ್ತು ನನ್ನ ತಂದೆ ಪಾಲುದಾರರಾಗಿರುತ್ತೇವೆ. ನಿ.ಪಿ.2 ರಲ್ಲಿರುವ ತಮ್ಮ ತಂದೆ ಹಾಗೂ ಮಾವನ ಸಹಿಗಳನ್ನು ಸಹ ಗುರುತಿಸಿರುತ್ತಾರೆ. ಆರೋಪಿ ಅಂಗಡಿಯನ್ನು ಖಾಲಿ ಮಾಡಲು ತಿಳಿಸಿದಾಗ ನನಗೆ ನಿ.ಪಿ.2 ರ ಪಾಲುದಾರಿಕೆಯಲ್ಲಿ ನನ್ನ ಸದಸ್ಯತ್ವವನ್ನು ಮುಕ್ತಾಯಗೊಳಿಸಿ (dissolution deed) , ತಾನು ನನ್ನ ಮಾವ ಹಾಗೂ ತಂದೆಯವರೊಂದಿಗೆ ನನ್ನ ಬದಲು ತಾನು ಸದಸ್ಯನಾಗಿರುವುದಾಗಿ ಪತ್ರಗಳನ್ನು ತೋರಿಸಿರುತ್ತಾನೆ. ಸಾಕ್ಷಿ ಸದರಿ ಎಫ್‌ಎಸ್‌ಎಲ್ ವರದಿ ಆಧಾರಿತ dissolution deed and partnership deed ಗಳನ್ನು ಗುರುತಿಸಿದ್ದು ಅವುಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ನಿ.ಪಿ.3 ನ್ನು ಆರೋಪಿ ನನ್ನ ಸಹಿ ನಕಲಿ ಮಾಡಿ ಸೃಷ್ಟಿಸಿದ್ದು ಇರುತ್ತದೆ. ನಂತರ ತನಿಖಾಧಿಕಾರಿಗಳು ನನ್ನ ಹಾಗೂ ನನ್ನ ತಂದೆ ಮಾದರಿ ಸಹಿಗಳನ್ನು ಹಾಗೂ ಬರವಣಿಗೆಯನ್ನು ಸಹ ಪಡೆದಿರುತ್ತಾರೆ. ನನ್ನ ಮಾದರಿ ಸಹಿಗಳನ್ನು 6 ಪುಟಗಳಲ್ಲಿ ಹಾಗೂ ನನ್ನ ಬರವಣಿಗೆಯನ್ನು ಪಡೆದಿರುತ್ತಾರೆ. ಸದರಿ 6 ಪುಟಗಳಲ್ಲಿರುವ ಮಾದರಿ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿ,ಪಿ.5 ರಿಂದ 10 ರವರೆಗೆ ಗುರುತಿಸಲಾಯಿತು. ಬರವಣಿಗೆ ಇರುವ ಪುಟಗಳನ್ನು ಸಾಕ್ಷಿ ಗುರುತಿಸಿದ್ದು ನಿ.ಪಿ.11 ರಿಂದ 16 ರವರೆಗೆ ಗುರುತಿಸಲಾಯಿತು. ತನ್ನ ತಂದೆಯ 6 ಪುಟಗಳಲ್ಲಿರುವ ಮಾದರಿ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು ನಿ,ಪಿ.17 ರಿಂದ 22 ಹಾಗೂ ಬರವಣಿಗೆಗಳನ್ನು ನಿ.ಪಿ.23 ರಿಂದ 28 ರವರೆಗೆ ಗುರುತಿಸಲಾಯಿತು. ನಿ.ಪಿ.3 ರಲ್ಲಿರುವ ಸಹಿಗಳು ತಮ್ಮ ಸಹಿಗಳಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ಕರೆಸಿ ವಿಚಾರಣೆ ಮಾಡಿ ಮರುಹೇಳಿಕೆ ಪಡೆದಿರುತ್ತಾರೆ.

ಆರೋಪಿ ನಮ್ಮ ಮಹೇಶ್ ಎಂಟರ್‌ಪ್ರೈಸಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡು ನಂಬಿಕೆದ್ರೋಹ ಮಾಡಿ, ನಕಲಿ ಡೀಡ್ ಸೃಷ್ಟಿ ಮಾಡಿ, ನನ್ನ, ನನ್ನ ತಂದೆ ಹಾಗೂ ಮಾವನ ಸಹಿಗಳನ್ನು ನಕಲಿ ಮಾಡಿ ನಿ.ಪಿ.2 ನ್ನು ಸೃಷ್ಟಿಸಿ, ಮತ್ತು ನಿ.ಪಿ.4 ರಂತೆ ಪಾಲುದಾರಿಕೆ ಪತ್ರವನ್ನು ಸೃಷ್ಟಿಸಿ ನಮಗೆ ಮೋಸ ಮಾಡಿದ್ದಾನೆ.

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೇಳಿದ್ದಾರೆ ಪಾಟೀ ಸವಾಲು ಮುಂದೂಡಿದೆ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.

ಓ ಹೇ ಕೇ ಸ ಇ ಒ

(ರೂಪ ಆರ್ ಕುಲಕರ್ಣಿ)
4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 24.06.2019 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲು ಶ್ರೀ ಕೆ.ವಿ.ಎಸ್ ವಕೀಲರಿಂದ ಆರೋಪಿ ಪರವಾಗಿಃ

ಆರೋಪಿ ನನ್ನ ಅತ್ತೆಯ ತಮ್ಮನ ಮಗ ಎಂದರೆ ಸರಿ. ಬೆಂಗಳೂರಿಗೆ ಆರೋಪಿಯನ್ನು ಕರೆದುಕೊಂಡು ಬಂದು ವಿದ್ಯಾಭ್ಯಾಸ ಮಾಡಿಸಿ, ಟಿಸಿಹೆಚ್ ಟ್ರೈನಿಂಗ್ ಸಹ ನನ್ನ ಮಾವ ಕೊಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಆರೋಪಿ ನನ್ನ ಮನೆಯಲ್ಲಿ ಉಳಿದುಕೊಂಡಿದ್ದರು ಎಂದರೆ ಸರಿ. ನನ್ನ ಮಾವ ಎಂಎಲ್ಎ ಮತ್ತು ಎಂಪಿ ಆಗಿದ್ದರು ಎಂದರೆ ಸರಿ. ನನ್ನ ಮಾವನಿಗೆ ಎಪಿಎಂಸಿ ಯಾರ್ಡ್‌ನಲ್ಲಿ ಒಂದು ಮಳಿಗೆ ಇತ್ತು ಎಂದರೆ ಸರಿ. ಅದು ಗಂಡ ಮಹೇಶ್‌ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಆ ಮಳಿಗೆಯನ್ನು ನನ್ನ ಗಂಡ ಪಾರ್ವತಮ್ಮ ಮತ್ತು ಮಕ್ಕಳಿಂದ ಭೋಗ್ಯವಾಗಿ ಪಡೆದಿದ್ದರು ಎಂದರೆ ಸರಿಯಲ್ಲ, ಆದರೆ ಬಾಡಿಗೆಗೆ ಪಡೆದಿದ್ದರು. ಆ ಅಂಗಡಿ ನಂ.114, 4ನೇ ಮೈನ್ ಎಪಿಎಂಸಿ ಯಾರ್ಡ್‌ನಲ್ಲಿತ್ತು ಎಂದರೆ ಸರಿ. ಅದರ ವ್ಯವಹಾರ ವಹಿವಾಟನ್ನು ನನ್ನ ಗಂಡ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ನನ್ನ ಮಾವ ಆರೋಪಿಯನ್ನು ಅಂಗಡಿಗೆ ಕರೆದುಕೊಂಡು ಬಂದಿರಬಹುದು. ನನ್ನ ಮಾವ ಆ ಮಳಿಗೆಯಲ್ಲಿ ಶಾಂತಿ ಫುಡ್ ಪ್ರಾಡಕ್ಟ್ ವ್ಯವಹಾರ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಆದರೆ ನನಗೆ ತಿಳಿದ ಹಾಗೆ ಮಹೇಶ್ ಎಂಟರ್‌ಪ್ರೈಸಸ್ ಆಗಿರುತ್ತದೆ. ನನ್ನ ಗಂಡ ದಿಃ 05.07.1998 ರಂದು ತೀರಿಕೊಂಡಿದ್ದರು ಎಂದರೆ ಸರಿ. ಆಗ ನಾನು ಮತ್ತು ನನ್ನ ಮಾವ ಮತ್ತು ನನ್ನ ಅಪ್ಪ ಪಾಲುದಾರಿಕೆಯಲ್ಲಿ ವ್ಯವಹಾರ ನಡೆಸುತ್ತಿದ್ದೆವು. ನನ್ನ ಗಂಡ ತೀರಿಕೊಂಡ ನಂತರ ನಾನು ಮತ್ತು ನನ್ನ ಅಪ್ಪ ಮಾತ್ರ ಪಾಲುದಾರಿಕೆ ವ್ಯವಹಾರ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಅಲ್ಲಿ ವ್ಯವಹಾರ ಮಾಡಲು ಜಾಗ ಸಾಕಾಗದೇ ಇದ್ದ ಕಾರಣ ದಿಃ 22.01.2001 ರಂದು ನಾನು ನನ್ನ ಹೆಸರಿನಲ್ಲಿ ಇನ್ನೊಂದು ಮಳಿಗೆಗೆ ಅರ್ಜಿ ಹಾಕಿ ಪಡೆದುಕೊಂಡಿದ್ದೆ ಎಂದರೆ ಸರಿ. ಅದು 9/6 ಶ್ರಮಿಕ ಭವನ, ಕಾವೇರಿ ಕಾಂಪ್ಲೆಕ್ಸ್ ಎಂದು ಈಗ ನನಗೆ ನೆನಪಿಲ್ಲ. ಅದರಲ್ಲಿ ದಾಸ್ತಾನು ಮಾಡಲು ಮಾತ್ರ ಅನುಮತಿ ಇದ್ದು ಮಳಿಗೆ ಮಾಡಲು ಅನುಮತಿ ಇರಲಿಲ್ಲ ಎಂದರೆ ಸರಿಯಲ್ಲ. 4 ವರ್ಷಗಳ ಅವಧಿ ಪಾರ್ವತಮ್ಮ ಅವರ ಬಳಿ ಯಾವುದೇ ರೀತಿಯ ದಾಖಲೆ ಮಳಿಗೆಗೆ ಮಾಡಿಕೊಂಡಿರಲಿಲ್ಲ ಎಂದು ನನಗೆ ಗೊತ್ತಿಲ್ಲ. 4 ವರ್ಷಗಳ ನಂತರ ದಿಃ 01.07.2002 ರಂದು ನಾನು ಪಾರ್ವತಮ್ಮರವರ

ಜೊತೆ ಲೀಸ್ ಅಗ್ರಿಮೆಂಟ್ ನನ್ನ ಹೆಸರಿನಲ್ಲಿ ಮಾಡಿಕೊಂಡಿದ್ದೆ ಎಂದು ನನಗೆ ಗೊತ್ತಿಲ್ಲ. ನಂತರ ಹೊತ ಗೋಡೌನ್ ಮಳಿಗೆ ಬೇಕು ಎಂದು ನಾನು ದಿಃ 24.11.2002 ರಂದು ಅರ್ಜಿ ಕೊಟ್ಟಿದ್ದೆ ಎಂದು ನನಗೆ ನೆನಪಿಲ್ಲ. ಅಲ್ಲಿ ಯಾವುದೆಲ್ಲಾ ವ್ಯವಹಾರ ಆಗುತ್ತಿತ್ತು ಎನ್ನುವ ಬಗ್ಗೆ ಸಹ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಹೊಸ ಅರ್ಜಿ ಸಲ್ಲಿಸುವಾಗ ಎಪಿಎಂಸಿಯವರದ್ದು ಯಾವುದೆಲ್ಲಾ ಶರತ್ತು ಇದ್ದವು ಎಂದು ನನಗೆ ಗೊತ್ತಿಲ್ಲ. ದಿಃ 06.09.2002 ರಂದು ನಾನು leave and license ಗೆ ಮತ್ತೊಂದು ಅರ್ಜಿ ಸಲ್ಲಿಸಿದ್ದೆ ಎಂದು ನನಗೆ ನೆನಪಿಲ್ಲ. ಈಗ ತೋರಿಸಿದ ದಾಖಲೆ leave and license ನಲ್ಲಿರುವ ಸಹಿ ನನ್ನದಲ್ಲ. ಎಪಿಎಂಸಿ ಯಾರ್ಡ್‌ನಲ್ಲಿ ಒಂದು ಮಳಿಗೆ ಇದ್ದರೆ ಇನ್ನೊಂದು ಮಳಿಗೆಗೆ ಅರ್ಜಿ ಸಲ್ಲಿಸಲು ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 06.09.2002 ರಂದು ಅರ್ಜಿ ಸಲ್ಲಿಸಿದ್ದು, ಎಪಿಎಂಸಿ ಯವರ ಶರತ್ತುಗಳ ಪ್ರಕಾರ ನನಗೆ ಮಳಿಗೆ ಸಿಕ್ಕುವುದಿಲ್ಲ ಎಂದು ಹೆದರಿಕೊಂಡು ನಿ.ಪಿ.3 ರ ಪ್ರಕಾರ ನಾನು ಮತ್ತು ನನ್ನ ಮಾವ dissolution deed ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ವ್ಯವಹಾರದಲ್ಲಿ ನನ್ನ ಮಾವ ದೊಡ್ಡಸ್ಥರು ಆಗಿದ್ದರಿಂದ ನನ್ನ ಸಹಿಯನ್ನು ಸಹ ನನ್ನ ಮಾವ ಹಾಕುತ್ತಿದ್ದರು ಎಂದರೆ ಸರಿಯಲ್ಲ. ನಾನು ಸರ್ಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ ಹಾಗೂ ಇನ್ನೊಂದು ಮಳಿಗೆ ಪಡೆಯುವ ಉದ್ದೇಶದಿಂದ ನಿ.ಪಿ.3 dissolution deed ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿಃ 06.09.2002 ರಂದು ಅರ್ಜಿ ಸಲ್ಲಿಸಲು ಬೇರೆ ಯಾರೂ ಜನ ಸಿಗದೇ ಇದ್ದ ಕಾರಣ ನಾನು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿ ಸ್ಟೇ ಪಡೆದಿದ್ದೆ ಎಂದರೆ ಸರಿಯಲ್ಲ.

1998-2012 ವರೆಗೆ ಆರೋಪಿ ನಮ್ಮ ಮನೆಯಲ್ಲಿ ಉಳಿದುಕೊಂಡು ನಮ್ಮ ಮಳಿಗೆಗಳ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿ ವ್ಯವಹಾರ ನೋಡುತ್ತಿರಲಿಲ್ಲ, ಅಂಗಡಿಯ ನೌಕರ ಮಾತ್ರ ಆಗಿದ್ದರು ಎನ್ನುವರು. ಆರೋಪಿಗೆ ನಾವು ಸಂಬಳ ಕೊಡುತ್ತಿದ್ದೆವು, ಆದರೆ ಎಷ್ಟು ಎಂದು ಗೊತ್ತಿಲ್ಲ. 1998 ರಿಂದ ಅಂಗಡಿಯಲ್ಲಿ ಇನ್ನೊಬ್ಬ ಪಾಲುದಾರರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ, ತುಮಕೂರಿನ ಸತ್ಯನಾರಾಯಣ

ಎನ್ನುವವರು ನಮ್ಮ ಮಳಿಗೆಯಲ್ಲಿ ಪಾಲುದಾರರಾಗಿದ್ದರು ಎಂದು ನನಗೆ ಗೊತ್ತಿಲ್ಲ. ತುಮಕೂರಿನ ಸತ್ಯನಾರಾಯಣರವರು ನಮ್ಮ ಅಂಗಡಿಯನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ನಮ್ಮ ಮಳಿಗೆ ನಷ್ಟದಲ್ಲಿತ್ತು ಎಂದರೆ ಸರಿಯಲ್ಲ. ಆಗ ನನ್ನ ಮಾವ ತುಂಬಾ ನಷ್ಟ ಆಗಿದೆ ಎಂದು ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಆದರೆ ವ್ಯವಹಾರಕ್ಕೆ ಸಾಲ ಮಾಡಿದ್ದರು. ನನ್ನ ಮಾವ ಚುನಾವಣೆಗೆ ಸಹ ಬಹಳಷ್ಟು ಸಾಲ ಮಾಡಿಕೊಂಡಿದ್ದು, ಅದಕ್ಕೆ ಮಳಿಗೆಯ ದುಡ್ಡನ್ನು ಬಳಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

ಆರೋಪಿ ಏನು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 1998 ರಲ್ಲಿ ಟಿಸಿಹೆಚ್ ಮುಗಿಸಿ ಆರೋಪಿ ಸರ್ಕಾರಿ ನೌಕರ ಶಿಕ್ಷಕರಾಗಿ ನೇಮಕ ಆಗಿದ್ದರು ಎಂದರೆ ಸರಿಯ್ಲ್ಲ. ಅದಕ್ಕೆ ನನ್ನ ಮಾವ ಕೆಲಸಕ್ಕೆ ಸೇರುವುದು ಬೇಡ, ಮಳಿಗೆಯನ್ನು ನೋಡಿಕೊಳ್ಳಲು ಹೇಳಿದ್ದು ಕೆಲಸವನ್ನು ಬಿಡಲು ಹೇಳಿದ್ದರು ಎಂದರೆ ಸರಿಯಲ್ಲ. ಆಗ ದಿಃ 01.01.2005 ರಂದು ಆರೋಪಿಯನ್ನು ಪಾಲುದಾರರಾಗಿ ಸೇರಿಸಿಕೊಂಡಿದ್ದೆವು ಎಂದರೆ ಸರಿಯಲ್ಲ. ಎಪಿಎಂಸಿ ಯಾರ್ಡ್‌ನಲ್ಲಿ ಪಾಲುದಾರರಾಗಲು ಮತ್ತು ನಿವೃತ್ತಿ ಹೊಂದಬೇಕಾದರೆ ವಿವರಗಳನ್ನು ಎಪಿಎಂಸಿಗೆ ತಿಳಿಸಿ ಅವರಿಂದ ಅನುಮತಿ ಪಡೆಯಬೇಕಾಗುತ್ತದೆ ಎಂದರೆ ಸರಿಯಲ್ಲ. ನನ್ನ ಮಾವ ಸ್ವತಃ ಎಪಿಎಂಸಿ ಯಾರ್ಡ್‌ಗೆ ಆರೋಪಿಯನ್ನು ಪಾಲುದಾರರಾಗಿ ಸೇರಿಸಲು ಅರ್ಜಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿಃ 28.01.2005 ರಂದು ನಾವು ಇನ್ನೊಂದು ಅಂಗಡಿ ಬಾಡಿಗೆಗೆ ನನ್ನ ತಂದೆ ಹೆಸರಿನಲ್ಲಿ ಪಡೆದಿದ್ದೆವು. ಆ ಅಂಗಡಿಯನ್ನು ನನ್ನ ಹೆಸರಿನಲ್ಲಿ ಪಡೆದಿದ್ದೆ ಎಂದರೆ ಸರಿಯಲ್ಲ. ಅದನ್ನು ಪ್ರಥಮವಾಗಿ ಟಿ.ವಿ.ರವಿಕುಮಾರ್ ಮತ್ತು ಟಿ.ಆರ್ ಶೌರ್ಯ ಅವರ ಮುಖಾಂತರ ನನ್ನ ಹೆಸರಿಗೆ ಮಾಡಿಸಿಕೊಂಡು ನಂತರ ನನ್ನ ತಂದೆ ಹೆಸರಿಗೆ ಮಾಡಿಕೊಂಡಿದ್ದೆ ಎಂದರೆ ಇರಬಹುದು. ದಿಃ27.08.2005 ರಂದು ನನ್ನ ಹೆಸರಿನಿಂದ ನನ್ನ ತಂದೆ ಹೆಸರಿಗೆ ಲೀಸ್ ಅಗ್ರಿಮೆಂಟ್ ಮಾಡಿಕೊಂಡಿರಬಹುದು. ನನಗೆ ಅಂಗಡಿ ಮತ್ತು ಮಳಿಗೆಯ ಯಾವುದೇ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನನಗೆ ನನ್ನ ಮಾವನ ಬರವಣಿಗೆ ಮತ್ತು ಸಹಿಯನ್ನು ಗುರುತಿಸಬಹುದು. ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ಮತ್ತು ಬರವಣಿಗೆ ನನ್ನ ಮಾವನದ್ದಲ್ಲ. ನನ್ನ ಮಾವ ಕೆಎಸ್‌ಟಿ ಮತ್ತು ಸಿಎಸ್‌ಟಿಗಾಗಿ ಸದರಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಮೊದಲು ಪಾಲುದಾರರಾಗಿ ನಾನು ನನ್ನ ಮಾವ ಮತ್ತು ನನ್ನ ಅಪ್ಪ ಇದ್ದು, ನಂತರ dissolution ಮಾಡಿ ನನ್ನ ಹೆಸರನ್ನು ತೆಗೆದು ಕೆ.ಟಿ.ಇಂಧುಧರ್ ಅವರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಿಃ 16.06.2006 ರಂದು ನನ್ನ ಮಾವ ಒಂದು ವಿಲ್ ನಾಮೆ ಮಾಡಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ದಿನಾಂಕ ನೆನಪಿಲ್ಲ ಆದರೆ ವಿಲ್ ನಾಮೆ ಮಾಡಿದ್ದರು ಎನ್ನುವರು. ಆ ಸಮಯದಲ್ಲಿ ಮಾವನಿಗೆ ಹೃದಯ ಖಾಯಿಲೆ ಮತ್ತು ಸಕ್ಕರೆ ಖಾಯಿಲೆ ಇತ್ತು. ಸಾಯುವ ಮೊದಲು ಅವರಿಗೆ ವ್ಯವಹಾರ ನೋಡಿಕೊಳ್ಳಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಾವ ಸಾಯುವ ಮೊದಲು ನನಗೆ ವ್ಯವಹಾರ ನಡೆಸಲು ಕೊಟ್ಟಿಲ್ಲ ಎಂದು ನನಗೆ ನೆನಪಿಲ್ಲ. ಸಾಯುವ ಮೊದಲು ನನ್ನ ಮಾವ ನನಗೆ ಒಂದು ಜಿಪಿಎ ಬರೆದುಕೊಟ್ಟಿದ್ದರು ಎಂದು ನನಗೆ ನೆನಪಿಲ್ಲ. ದಿಃ 10.07.2006 ರಂದು ಒಂದು ಜಿಪಿಎ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಯುವ ಮೊದಲು ಜಿಪಿಎ ಪತ್ರದಲ್ಲಿ ಮೊದಲೇ dissolution deed ಆಗಿದ್ದರಿಂದ ಮಹೇಶ್ ಎಂಟರ್‌ಪ್ರೈಸಸ್‌ನಲ್ಲಿ ನನಗೆ ಹಕ್ಕು ಇಲ್ಲದ ಕಾರಣ ಮಹೇಶ್ ಎಂಟರ್‌ಪ್ರೈಸಸ್ ನಲ್ಲಿ ನನ್ನ ಮಾವನ ಹಕ್ಕನ್ನು ನೋಡಿಕೊಳ್ಳಲು ನನಗೆ ಜಿಪಿಎ ಕೊಟ್ಟಿದ್ದರು ಎಂದರೆ ಸರಿಯಲ್ಲ. ಈಗ ತೋರಿಸಿದ ದಾಖಲೆ ಸದರಿ ಜಿಪಿಎ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಹೆಬ್ಬೆಟ್ಟು ಹಾಕುತ್ತಿರಲಿಲ್ಲ, ಅವರಿಗೆ ಸಹಿ ಹಾಕಲು ಬರುತ್ತಿತ್ತು ಎನ್ನುವರು. ನನ್ನ ಮಾವ ದಿಃ 18.08.2006 ರಂದು ತೀರಿಕೊಂಡಿರುತ್ತಾರೆ. ಅದಾದ ನಂತರ ಎಲ್ಲಾ ವ್ಯವಹಾರವನ್ನು ನಾನು ಮತ್ತು ನನ್ನ ತಂದೆ ನೋಡಿಕೊಳ್ಳುತ್ತಿದ್ದೇವೆ.

2006 ರಲ್ಲಿ ಹೊಸ VAT ಮಾಡಿಸಬೇಕು ಎಂದು ಖಾಯ್ದೆ ಬಂದಿತ್ತು ಎಂದರೆ ಸರಿ. ಅದಕ್ಕೆ ಎಲ್ಲಾ ಪಾಲುದಾರರು ಸಹಿ ಮಾಡಿ ಅರ್ಜಿ ಸಲ್ಲಿಸಬೇಕಾಗಿತ್ತು ಎಂದರೆ ಇರಬಹುದು. ನಾನು ಅರ್ಜಿ ಸಲ್ಲಿಸಿದ್ದ ಬಗ್ಗೆ ನೆನಪಿಲ್ಲ. ಅರ್ಜಿ ಸಲ್ಲಿಸುವಾಗ ಎಲ್ಲಾ ಪಾಲುದಾರರ ಭಾವಚಿತ್ರ ಹಾಗೂ

ಅದಕ್ಕೆ ಸಹಿ ಹಾಕಿ ಸಲ್ಲಿಸಬೇಕಾಗಿತ್ತು ಎಂದರೆ ಗೊತ್ತಿಲ್ಲ. ನಾವು ಎಲ್ಲರೂ ಪಾಲುದಾರರು ಸೇರಿ ಭಾವಚಿತ್ರ ಹಾಕಿ ಸಹಿ ಹಾಕಿ ಅರ್ಜಿ ಸಲ್ಲಿಸಿದ್ದೇವೆ ಎಂದು ನನಗೆ ನೆನಪಿಲ್ಲ. ಮಾವ ತೀರಿಕೊಂಡ ನಂತರ ನನ್ನ ಮಾವ ಮಾಡಿದ ಎಲ್ಲಾ ಸಾಲಗಳು ಬಾಕಿ ಇದ್ದವು ಎಂದರೆ ಸರಿ. ಸುಮಾರು ರೂ.2-3 ಕೋಟಿ ಸಾಲ ಇತ್ತು. ಈ ಸಾಲವನ್ನು ತೀರಿಸಲು ನಾನು ಸುಮಾರು ಬ್ಯಾಂಕುಗಳಿಗೆ ಅರ್ಜಿ ಸಲ್ಲಿಸಿದ್ದೆ ಎಂದು ನನಗೆ ನೆನಪಿಲ್ಲ. ಎಪಿಎಂಸಿ ಯಾರ್ಡ್ ಬ್ಯಾಂಕಿನಲ್ಲಿ ಸಹ ಸಾಲಕ್ಕೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಎಸ್‌ಬಿಎಂ ಬ್ಯಾಂಕಿನಲ್ಲಿ ಎಲ್ಲಾ ಪಾಲುದಾರರು ಸೇರಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದೇವೆ ಎಂದು ನೆನಪಿಲ್ಲ. ದಿಃ 09.08.2007 ರಂದು ಸಾಲದ ಮೇಳದಲ್ಲಿ ನಾನು ಮತ್ತು ಆರೋಪಿ ಹಾಗೂ ನನ್ನ ತಂದೆ ಸೇರಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಆ ಸಾಲ ಮೇಳದಲ್ಲಿ ನಮ್ಮದು ಈಗಾಗಲೇ ಬಹಳಷ್ಟು ಸಾಲ ಇದ್ದ ಕಾರಣ ಅರ್ಜಿಯನ್ನು ತಿರಸ್ಕರಿಸಿದ್ದರು ಎಂದರೆ ಸರಿಯಲ್ಲ.

2008 ರಲ್ಲಿ ನಾನು ಹೆಚ್.ಡಿ.ರೇವಣ್ಣ ಅವರ ವಿರುದ್ಧ ನಾನು ಹೊಳೆನರಸೀಪುರ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಪರ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆ ಎಂದರೆ ಸರಿ. ನಾನು ಚುನಾವಣೆಯಲ್ಲಿ ಸ್ಪರ್ಧಿಸಿದ್ದರಿಂದ ಹಾಗೂ ನನಗೆ ಹಣದ ಅವಶ್ಯಕತೆ ಇದ್ದ ಕಾರಣ ನಾನು ಬಹಳಷ್ಟು ಕಡೆ ಸಾಲ ಮಾಡಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಆರೋಪಿಯನ್ನು ನನ್ನ ಪಾಲುದಾರನಾಗಿ ಕಳುಹಿಸಿ ಸೇಟು ಎನ್ನುವವರ ಬಳಿ ಸಾಲ ಪಡೆಯಲು ಕಳುಹಿಸಿದ್ದೆ ಎಂದರೆ ಸರಿಯಲ್ಲ. ಆಗ ನಾನು ನನ್ನ ತಮ್ಮನ ಚೆಕ್ ಕೊಟ್ಟು ಸೇತು ಅವರ ಬಳಿಯಿಂದ ರೂ.50 ಲಕ್ಷ ಸಾಲ ಪಡೆದಿದ್ದೆ ಎಂಬ ಪ್ರಶ್ನೆಗೆ ಸಾಕ್ಷಿ ಅದಕ್ಕೆ ಮತ್ತು ಇದಕ್ಕೆ ಸಂಬಂಧ ಇಲ್ಲ ಎನ್ನುವರು. ಆರೋಪಿ ಪಾಲುದಾರನಾಗಿ ಸೇಟು ಹತ್ತಿರ ಹಣ ಪಡೆಯಲು ನನ್ನ ತಮ್ಮನ ಚೆಕ್‌ನ್ನು ಕೊಟ್ಟಿದ್ದರಿಂದ, ಸರಿಯಾದ ಸಮಯಕ್ಕೆ ಹಣ ಪಾವತಿಸದೇ ಇದ್ದುದರಿಂದ ಆರೋಪಿಯನ್ನು ಕರೆದುಕೊಂಡು ಹೋಗಿ ಕೂಡಿ ಹಾಕಿದ್ದರು ಎಂದರೆ ಸರಿಯಲ್ಲ. ಆಗ ನಾನು 3ನೇ ಮಳಿಗೆ ಶ್ರೇಯಸ್ ಎಂಟರ್‌ಪ್ರೈಸಸ್‌ನ್ನು ಮಾರಲು ಪ್ರಯತ್ನಿಸಿದ್ದು ಎಂಬ ಪ್ರಶ್ನೆಗೆ ಸಾಕ್ಷಿ ಮಾರಾಟ ಮಾಡಲು ಪ್ರಯತ್ನಿಸಿದ್ದೆ, ಆದರೆ ಆ ವಿಷಯಕ್ಕೆ ಅಲ್ಲ ಎನ್ನುವರು. ಶ್ರೇಯಸ್ ಎಂಟರ್‌ಪ್ರೈಸಸ್‌ನ್ನು ಆರೋಪಿಯೇ ಮಾರಾಟ ಮಾಡಿಕೊಟ್ಟು ಸೇಟುರವರ ಹಣ

ತೀರಿಸಿದ್ದಾರೆ ಎಂದರೆ ಸರಿಯಲ್ಲ. ಶ್ರೇಯಸ್ ಎಂಟರ್‌ಪ್ರೈಸಸ್‌ನ್ನು ಎಂ.ವೀರಣ್ಣರವರಿಗೆ ಮಾರಿ ದಾಖಲೆ ಮಾಡುವಾಗ ಆರೋಪಿಯ ಸಹಿ ಕೂಡ ಪಡೆಯಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯಾಗಿ ಪಡೆದಿರಬಹುದು ಎನ್ನುವರು.

ನನ್ನ ಮಾವ ಅವರ ಜೀವಿತ ಕಾಲದಲ್ಲಿ ಯಾವುದಾದರೂ ಸಿವಿಲ್ ದಾವೆ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ 'ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 24.06.2019 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲು ಶ್ರೀ ಕೆ.ವಿ.ಎಸ್ ವಕೀಲರಿಂದ ಆರೋಪಿ ಪರವಾಗಿಃ

ನನ್ನ ಮಾವ ತೀರಿಕೊಂಡ ನಂತರ ಒ.ಎಸ್.8626/1996 ರಲ್ಲಿ ನಾವು ಅರ್ಜಿ ಸಲ್ಲಿಸಿ ಅದರಲ್ಲಿ ಪಕ್ಷಗಾರರಾಗಿ ಸೇರಿಕೊಂಡಿದ್ದೆ ಎಂದು ನನಗೆ ಗೊತ್ತಿಲ್ಲ. ಆ ದಾವೆ ನನ್ನ ಮಾವ ಕೋಡೇಸ್ ರವರ ವಿರುದ್ಧ ದಾಖಲಿಸಿದ್ದರು ಎಂದರೆ ಹೌದು. ಆ ದಾವೆಯಲ್ಲಿ ನನಗೆ ನ್ಯಾಯಾಲಯಕ್ಕೆ ಹೋಗಲು ಆಗದೇ ಇದ್ದ ಕಾರಣ ನಾನು ಅದರಲ್ಲಿ ಹಾಜರಾಗಲು ಆರೋಪಿಗೆ ಜಿಪಿಎ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಮತ್ತು ಮಾವನಿಗೆ ಆರೋಪಿ ಸಂಬಂಧಿ ಆಗಿದ್ದರಿಂದ ಎಲ್ಲಾ ವ್ಯವಹಾರಗಳಲ್ಲಿ ನಾವು ಅವರನ್ನು ಬಳಸಿಕೊಳುತ್ತಿದ್ದೆವು ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ಮಾವ ಬಳಸುತ್ತಿದ್ದರು ನಾನಲ್ಲ ಎನ್ನುವರು. ಪಾಲುದಾರಿಕೆ ಪತ್ರ ಮತ್ತು dissolution deed ನನ್ನ ಮಾವ ಬದುಕಿರುವಾಗಿ ಮಾಡಿಕೊಂಡಿದ್ದರು. ಕೆಲವೊಮ್ಮೆ ನನ್ನ ಮತ್ತು ನನ್ನ ತಂದೆಯ ಸಹಿಗಳನ್ನು ನಮ್ಮ ಗಮನಕ್ಕೆ ತರದೇ ನನ್ನ ಮಾವನೇ ಸಹಿ ಹಾಕುತ್ತಿದ್ದರು ಎಂದರೆ ಸರಿಯಲ್ಲ.

ಅಂಗಡಿಗೆ VAT ಅರ್ಜಿ ಸಲ್ಲಿಸುವಾಗ ಎಲ್ಲಾ ಪಾಲುದಾರರು ಅದಕ್ಕೆ ಸಹಿ ಹಾಕಬೇಕು ಎಂದರೆ ಸರಿ. ನಮ್ಮ ಅಂಗಡಿಗೆ VAT certificate ಮಾಡಿದ್ದು ನನಗೆ ಗೊತ್ತಿಲ್ಲ. VAT certificate ಗೆ ದಿಃ 25.11.2006 ರಂದು ನನ್ನ ತಂದೆ ಮತ್ತು ಆರೋಪಿ ಅರ್ಜಿ ಸಲ್ಲಿಸಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ತಂದೆ ಮಾತ್ರ ಹಾಕಿರಬಹುದು ಎನ್ನುವರು. ಈಗ ತೋರಿಸಿದ VAT ಅರ್ಜಿಯಲ್ಲಿರುವ ಸಹಿ ನನ್ನ ತಂದೆಯ ಸಹಿ. ಸಾಕ್ಷಿ ಮುಂದುವರೆದು ಅದರಲ್ಲಿರುವ ಸಹಿ ನನ್ನ ತಂದೆಯ ಸಹಿ ಅಲ್ಲ ಎನ್ನುವರು. ಅದರಲ್ಲಿರುವ ಸಹಿ ನನ್ನ ತಂದೆಯ ಸಹಿ ಎಂದರೆ ಸರಿಯಲ್ಲ. ಸದರಿ VAT ಅರ್ಜಿಯನ್ನು ನನ್ನ ತಂದೆಯವರೇ ಸಲ್ಲಿಸಿದ್ದು, ಅದರಲ್ಲಿರುವ ಸಹಿ ನನ್ನ ತಂದೆಯ ಸಹಿ ಎಂದರೆ ಸರಿಯಲ್ಲ.

ನನ್ನ ಮಾವ ತೀರಿ ಹೋದ ನಂತರ ನಾನು ಮಹೇಶ್ ಎಂಟರ್‌ಪ್ರೈಸಸ್‌ಗೆ ಸಾಲ ಬೇಕು ಎಂದು ಎಸ್‌ಬಿಎಂಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಾನು ಎಸ್‌ಬಿಎಂಗೆ ಸಾಲಮೇಳದಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆ ಸಾಲಮೇಳದ ಅರ್ಜಿಯಲ್ಲಿ ನಾನು, ನನ್ನ ತಂದೆ ಮತ್ತು ಆರೋಪಿ ಎಲ್ಲರೂ ಸಹಿ ಹಾಕಿದ್ದೇವೆ ಎಂದರೆ ಸರಿಯಲ್ಲ. ಸಾಲಮೇಳದಲ್ಲಿ ನಾನು ಸುಮಾರು ಕಡೆ ಸಾಲ ಪಡೆದಿದ್ದರಿಂದ ಅರ್ಜಿ ತಿರಸ್ಕೃತಗೊಂಡಿತ್ತು ಎಂದರೆ ಸರಿಯಲ್ಲ.

ನನ್ನ ಮಾವ ತೀರಿಕೊಂಡ ನಂತರ ನನ್ನ ನಾದಿನಿ ರಾಜೇಶ್ವರಿ ವಿಭಾಗ ಕೋರಿ ದಾವೆ 2189/2008 ಸಲ್ಲಿಸಿದ್ದರು ಎಂದರೆ ಸರಿ. ಈಗಲೂ ಸಹ ಆ ದಾವೆ ನಡೆಯುತಿತಲ್ಲ, ಅದು ವಜಾ ಆಗಿರುತ್ತದೆ. ನನ್ನ ಮಾವ ಬದುಕಿರುವವರೆಗೆ ಅವರೇ ಪ್ರತಿ ದಾಖಲೆಗಳಿಗೆ ಸಹಿ ಹಾಕುತ್ತಿದ್ದರು ಎಂದರೆ ಸರಿ. ಈಗ ತೋರಿಸಿದ dissolution deed ನಲ್ಲಿ ನಾನು ಮತ್ತು ನನ್ನ ಮಾವ ಸಹಿ ಹಾಕಿದ್ದೆವು ಎಂದು ನನಗೆ ನೆನಪಿಲ್ಲ. ದಿಃ 11.06.2006 ರಂದು ನನ್ನ ಮಾವ ಅದಕ್ಕೆ ಹೆಬ್ಬೆಟ್ಟು ಗುರುತು ಹಾಕಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಮಾಡಿರಲಿಕ್ಕಿಲ್ಲ ಎನ್ನುವರು. ನನ್ನ ಮಾವ ಸಾಯುವ ಪೂರ್ವದಲ್ಲಿ ಒಂದು ವಿಲ್ ನಾಮೆ ಮಾಡಿದ್ದರು ಎಂದರೆ ಸರಿ. ಅದಕ್ಕೆ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ. ನಕಲು ಪ್ರತಿಯನ್ನು ಸಲ್ಲಿಸುತ್ತೇನೆ. ಮಾವನ ಹೆಬ್ಬೆಟ್ಟನ್ನು ನಾವೇ ಹಾಕಿಸಿ ವಿಲ್ ನಾಮೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಈಗ ತೋರಿಸಿದ ದಾಖಲೆ ದಿಃ 16.06.2006 ರ ವಿಲ್ ನಾಮೆಯ ಜೆರಾಕ್ಸ್ ಪ್ರತಿ ಎಂದರೆ ಸರಿ. ವಿಲ್ ನಾಮೆಯಲ್ಲಿ ಮಾವ ಹೆಬ್ಬೆಟ್ಟು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಆ ಸಮಯದಲ್ಲಿ ನೋಡಿಲ್ಲ. ಸದರಿ ವಿಲ್ ನಾಮೆ ನೋಂದಣಿಯಾಗಿದೆ ಎಂದರೆ ಸರಿ. ನನ್ನ ಮಾವ ತೀರಿಕೊಂಡ ನಂತರ ಆರೋಪಿಗೆ ನಾನು ಜಿಪಿಎ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಒ.ಎಸ್.8626/1996 ರಲ್ಲಿ ಗನಶ್ಯಾಮ್ ಪುಟ್ಟಸ್ವಾಮಿ ವಿರುದ್ಧ ದಾಖಲಿಸಿದ ದಾವೆಯಲ್ಲಿ ನನ್ನ ಮಾವ ಜಿಪಿಎ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿಃ 25.04.2012 ರಂದು ನಾನು ಮತ್ತು ಬೆಂಬಲಿಗರು ಸೇರಿ ಮಹೇಶ್ ಎಂಟರ್‌ಪ್ರೈಸಸ್‌ಗೆ ಹೋಗಿ ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಾಲೀಕರು ಅಂಗಡಿ ಬಿಟ್ಟು ಕೊಡಿ

ಎಂದು ಹೇಳಿದ್ದಕ್ಕೆ ಬಿಟ್ಟು ಕೊಡಿ ಎಂದು ಹೇಳಲು ನಾನು ಮಾಲೀಕರ ಜೊತೆ ಅಲ್ಲಿ ಹೋಗಿದ್ದೆ ಎನ್ನುವರು. ಆ ದಿನ ಅಲ್ಲಿ ಹೋಗಿ ನಾವು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಗಲಾಟೆಗೆ ಸಂಬಂಧಿಸಿ ನನ್ನ ವಿರುದ್ಧ 230/12 ದಾಖಲಾಗಿತ್ತು ಎಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಪಟ್ಟಂತೆ ಪೊಲೀಸರು ನನ್ನ ಬಳಿ ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ. ಇದಾದ ನಂತರ ಅಂಗಡಿ ಮಾಲೀಕರ ಮೇಲೆ ಒ.ಎಸ್.3205/12 ದಾವೆಯನ್ನು ಆರೋಪಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಇಷ್ಟೆಲ್ಲಾ ಆದ ನಂತರ ನಾನು ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಎಪಿಎಂಸಿ ಯಾರ್ಡ್‌ನಲ್ಲಿ ನನಗೆ ಸುಮಾರು ಅಂಗಡಿಗಳು ಇದ್ದ ಕಾರಣ ಅಲ್ಲಿಯ ಕಾನೂನು ಕ್ರಮಗಳ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿ. ಮಹೇಶ್ ಎಂಟರ್‌ಪ್ರೈಸಸ್‌ಗೆ ನಾನು ಸುಮಾರು ಕಡೆ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ಮಾತ್ರ ಪಡೆದಿದ್ದೆ. ಅಕ್ಕಿ ಸಪ್ಲೈ ಮಾಡುವವರಿಗೆ ಸುಮಾರು ರೂ.80 ರಿಂದ ಒಂದು ಕೋಟಿ ಕೊಡಲು ಸಾಲ ಇತ್ತು ಎಂದರೆ ಸರಿಯಲ್ಲ. ಎಪಿಎಂಸಿ ಯಲ್ಲಿ ಅಂಗಡಿ ಖಾಲಿ ಮಾಡಬೇಕಾದರೆ ಎಪಿಎಂಸಿ ಅವರಿಗೆ ಒಂದು ಅರ್ಜಿ ಕೊಟ್ಟು ಖಾಲಿ ಮಾಡಬೇಕಾಗುತ್ತದೆ ಎಂದರೆ ಸರಿ. ಅಲ್ಲಿ ಯಾವುದೇ ಹಣ ಬಾಕಿ ಇದ್ದರೆ ಎನ್‌ಒಸಿ ಕೊಡುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅರ್ಜಿ ಸಲ್ಲಿಸಿಲ್ಲ, ಆರೋಪಿ ಮಾಲೀಕರ ಜೊತೆ ಮಾತನಾಡಿ ಅಂಗಡಿ ಅವರೇ ಖಾಲಿ ಮಾಡಿದ್ದಾರೆ ಎನ್ನುವರು. ಅಂಗಡಿ ಖಾಲಿ ಮಾಡುವ ಮೊದಲೇ ಮುಂಗಡ ಹಣವನ್ನು ಮಾಲೀಕರು ನನಗೆ ವಾಪಸ್ಸು ಕೊಟ್ಟಿದ್ದಾರೆ ಎಂದರೆ ಸರಿ. ಇದುವರೆಗೆ ಎಪಿಎಂಸಿ ಅವರು ನನ್ನ ಹೆಸರಿಗೆ ಎನ್‌ಒಸಿ ಕೊಟ್ಟಿಲ್ಲ ಎಂದು ನನಗೆ ಗೊತ್ತಿಲ್ಲ. ದೂರು ಕೊಡುವಾಗ ನಾನು ಮಾಡಿದ ಆಪಾದನೆಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಠಾಣೆಯಲ್ಲಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮೂಲ ಪಾಲುದಾರಿಕೆ ಪತ್ರ ಕೊಟ್ಟಿದ್ದೆ. ನಾನು ಮೂಲ ಪಾಲುದಾರಿಕೆ ಪತ್ರ ಕೊಟ್ಟಿಲ್ಲ, ಅದರ ಜೆರಾಕ್ಸ್ ಪ್ರತಿ ಮಾತ್ರ ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದರು ಎಂದರೆ ಸರಿಯಲ್ಲ. ಎಫ್‌ಎಸ್‌ಎಲ್‌ನವರು ಮೂಲ ಪ್ರತಿ ಕೊಟ್ಟಿಲ್ಲ ಎಂದು ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ 'ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.**

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು